# ಹೆಮ್ಮೆ ಉಕ್ಕಿಸುವ 'ವುಮನ್ ಪವರ್'

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಎಪ್ಪತ್ತು ವರ್ಷಗಳಾದವು. ಆರಂಭದಿಂದಲೂ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಎಲ್ಲರೂ ಮಾತನಾಡುತ್ತಲೇ ಬಂದಿದ್ದಾರೆ. ಆದರೆ ವಾಸ್ತವದಲ್ಲಿ ಈಗಲೂ, 'ಮಹಿಳೆ ಸ್ವತಂತ್ರಳೇ?' ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿಯೇ ಉಳಿದಿದೆ. ಒಂದು ಕಡೆ ಮಹಿಳಾ ಮೀಸಲಾತಿಯ ಬಗ್ಗೆ ಸ್ವತಃ ಮಹಿಳೆಯರೇ ಉದ್ದುದ್ದ ಭಾಷಣ ಬಿಗಿದು, ಸಂಸತ್‌ನಲ್ಲಿ ಮಸೂದೆ ಮಂಡಿಸಿ ಕಾಯುತ್ತಿದ್ದರೆ; ಇನ್ನೊಂದೆಡೆ ಮಹಿಳೆಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲ ಎಂಬ ಕೂಗು ಕೂಡಾ ಕೇಳಿ ಬರುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದರೂ ಇಂದಿಗೂ ಹೆಚ್ಚಿನ ಮಹಿಳೆಯರು ಪುರುಷನ ನೆರಳಲ್ಲೇ ಬದುಕಬೇಕಾದ ಪರಿಸ್ಥಿತಿ ಇದೆ ಎಂಬುದಂತೂ ಸತ್ಯ.

ಹಾಗೆ ನೋಡಿದರೆ 'ನಮ್ಮ ದೇಶದಲ್ಲಿ ಮಹಿಳೆಗೆ ಕೊಟ್ಟಿರುವಷ್ಟು ಸ್ವಾತಂತ್ರ್ಯವನ್ನು ಬೇರೆ ಯಾವ ದೇಶವೂ ನೀಡಿಲ್ಲ. ಆದರಲ್ಲೂ ನಮ್ಮ ಸಂಸ್ಕೃತಿಯಲ್ಲಿ ಮಹಿಳೆಗೆ ಪೂಜನೀಯ ಸ್ಥಾನ ನೀಡಲಾಗಿದೆ' ಎಂಬುದು ಪುರುಷರು ಹಲವು ವೇದಿಕೆಗಳಲ್ಲಿ ಹೇಳಿಕೊಳ್ಳುವ ಮಾತು. ಆದರೆ ವಾಸ್ತವದಲ್ಲಿ ಇದೇ ಪರಿಸ್ಥಿತಿ ಇದೆಯೇ?

ಹೌದು, ಇಂದು ಮಹಿಳೆ ಕಾಲಿಡದ ಕ್ಷೇತ್ರಗಳಿಲ್ಲ. ಸ್ವತಂತ್ರ ಭಾರತದಲ್ಲಿ ಮಹಿಳೆಯ ಶಕ್ತಿ ಪ್ರದರ್ಶನ, ಬಲ ಪ್ರದರ್ಶನ ಎಲ್ಲ ಕ್ಷೇತ್ರಗಳಲ್ಲಿ ನಡೆಯುತ್ತಿದೆ. ಎಲ್ಲೆಡೆಯೂ ಅಭೂತಪೂರ್ವ ಯಶಸ್ಸನ್ನು ಮಹಿಳೆ ಗಳಿಸುತ್ತಲೇ ಬಂದಿದ್ದಾಳೆ. ಕ್ರೀಡೆ, ರಾಜಕೀಯ, ಕಲೆ, ಸಾಹಿತ್ಯ, ರಂಗಭೂಮಿ, ಪೊಲೀಸ್, ಬಾಹ್ಯಾಕಾಶ.. ಹೀಗೆ ಎಲ್ಲ ರಂಗದಲ್ಲೂ ಯಶಸ್ಸಿನ ಕಿರೀಟ ಧರಿಸಿದ ಅನೇಕ ಮಹಿಳೆಯರಿದ್ದಾರೆ. ಇಷ್ಟೆಲ್ಲ ಪ್ರಗತಿ, ಸಾಧನೆ, ಯಶಸ್ಸಿನಲ್ಲಿ ಮಹಿಳೆ ಗುರುತಿಸಿಕೊಂಡಿದ್ದರೂ 'ಸ್ವಾತಂತ್ರ್ಯ' ಎಂಬ ವಿಷಯ ಬಂದಾಗ ಅಪಸ್ವರ ಕೇಳಿ ಬರುವುದೇ ಹೆಚ್ಚು.

ಹಾಗಾದರೆ ದೇಶದಲ್ಲಿ ಮಹಿಳೆಗೆ ನಿಜಕ್ಕೂ ಸ್ವಾತಂತ್ರ್ಯ ಸಿಕ್ಕಿದೆಯಾ? ಮಹಿಳೆ ಎಷ್ಟು ಸ್ವತಂತ್ರಳು? ವೈಯಕ್ತಿಕ ನೆಲೆಯಲ್ಲಿ ಮಹಿಳೆಯ ನಿಲುವೇನು? ಆರ್ಥಿಕವಾಗಿಯೂ ಮಹಿಳೆಗೆ ಸ್ವಾತಂತ್ರ್ಯ ಸಿಕ್ಕಿದೆಯಾ? ಹಾಗಿದ್ದೂ ದಿನೇ ದಿನೇ ಮಹಿಳೆಯರ ಮೇಲಿನ ದೌರ್ಜನ್ಯ ಏಕೆ ಹೆಚ್ಚುತ್ತಲೇ ಇದೆ? ಇದನ್ನು ತಡೆಯಲು ಸಾಧ್ಯವಿಲ್ಲವೆ? – ಇವೇ ಮುಂತಾದ ಪ್ರಶ್ನೆಗಳನ್ನು ಹೊತ್ತು 'ಸುಧಾ' ಭೇಟಿಯಾದದ್ದು ಕೇವಲ ಐವರು ಸಾಧಕಿಯರನ್ನು. ಅವರು ಈ ಪ್ರಶ್ನೆಗಳಿಗೆ ನೀಡಿದ ಉತ್ತರಗಳು ಮಾತ್ರ ಬಹುತೇಕ ಎಲ್ಲ ರಂಗದ ಮಹಿಳೆಯರ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುವಂತಿತ್ತು. ಸ್ವಾತಂತ್ರ್ಯೋತ್ಸವದ ಸನ್ನಿಧಿಯಲ್ಲಿ ಹೀಗೊಂದು ಮುಖಾಮುಖಿ, ನಮ್ಮ ಸಮಾಜ ಎದುರಿಸುತ್ತಿರುವ ಬಿಕ್ಕಟ್ಟುಗಳ ಬಗ್ಗೆಯೂ ಬೆಳಕು ಚೆಲ್ಲಿದೆ.




ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಎನ್ನೋದು ಮನೆಯಿಂದಲೇ ಶುರುವಾಗುತ್ತೆ. ಹೆಣ್ಣು ಮಗುವನ್ನು ಬೆಳೆಸುವಾಗಲೇ ತಂದೆ ತಾಯಿ ಗಂಡು ಮಕ್ಕಳ ಹಾಗೇ ಬೆಳೆಸಬೇಕು, ಅಲ್ಲಿ ಭೇದ ಭಾವ ಇರಲೇ ಬಾರದು. ಹೆಣ್ಣು ಮಗುವಿಗೂ ಮನೆಯಲ್ಲಿ ಯಾವುದೇ ನಿರ್ಬಂಧ, ಚೌಕಟ್ಟು, ಕಟ್ಟುಪಾಡು ಇರಲೇಬಾರದು. ಇದೇ ಮುಂದೆ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತೆ. ಹೆಣ್ಣು ಮಕ್ಕಳು ಎಂದರೆ ಕಿಚನ್‌ಗೇ ಸೀಮಿತ ಎಂಬ ಧೋರಣೆ ಇಂದೂ ಹೆಚ್ಚಿನವರ ಮನೆಗಳಲ್ಲಿ ಇದೆ. ಈ ಸಂಸ್ಕೃತಿ ಒಳ್ಳೆಯದಲ್ಲ.

ಇಂದು ಮಹಿಳೆಗೆ ಎಷ್ಟು ಸ್ವಾತಂತ್ರ್ಯ ಇದೆ ಎಂದು ಕೇಳಿದ್ರೆ ಉತ್ತರಿಸಲು ನನಗೆ ಹೆಮ್ಮೆ, ಖುಷಿ ಎರಡೂ ಆಗುತ್ತೆ. ಏಕೆಂದರೆ ಚಿಕ್ಕಂದಿನಿಂದಲೂ ನಾನು ತುಂಬ ಫ್ರೀಯಾಗಿ ಬೆಳೆದವಳು. ನಮ್ಮ ಮನೆಯಲ್ಲಿ ಯಾವುದಕ್ಕೂ ಯಾವುದೇ ನಿರ್ಬಂಧ ಇರಲಿಲ್ಲ. ನಾನು ಏನೇ ಮಾಡಿದ್ರೂ ಅದನ್ನು ಅಪ್ಪ ಅಮ್ಮ ತಡೀತಾ ಇರಲಿಲ್ಲ. ದೊಡ್ಡವರಾದ ಮೇಲೆ ನಮ್ಮ ಆಸಕ್ತಿಗೆ ಪ್ರೋತ್ಸಾಹ ಕೊಟ್ರು. ನನ್ನ ತಮ್ಮ ಗೌರಂಗ್ ಸ್ಪೋರ್ಟ್ಸ್‌ನಲ್ಲಿ ಆಸಕ್ತಿ ತೋರಿಸಿದ, ಅಲ್ಲಿಗೆ ಕಳಿಸಿದ್ರು. ನಾನು ಕಲ್ಚರಲ್